# ಗುರುವಿನೊಡನೆ ದೇವರಡಿಗೆ



**ಆಧ್ಯಾತ್ಮಿಕ ಸಂಭಾಷಣೆ** **ಸ್ವಾಮಿ ಭೂತೇಶಾನಂದ**

**ಪ್ರಶ್ನೆ: ಸ್ವಾಮೀಜಿ, ತಮ್ಮ ತಪಸ್ಯೆಯ ಜೀವನದ ಬಗ್ಗೆ ತಿಳಿಸಿ.**

**ಉತ್ತರ :** ನಿಮಗೆ ಹೇಳುವಷ್ಟು ತಪಸ್ಯೆಯನ್ನೇನೂ ನಾನು ಮಾಡಿಲ್ಲ. ತಪಸ್ಯೆಗೆ ಎರಡು ಅರ್ಥಗಳನ್ನು ನೀಡಬಹುದು: ಮೊದಲನೆಯದು **ಕಠಿಣ ಶರೀರಶ್ರಮವುಳ್ಳ ತಪಸ್ಯೆ** ಮತ್ತು ಎರಡನೆಯದು, **ಸಾಧ್ಯವಾದಷ್ಟು ಭಗವಂತನಲ್ಲಿ ಮನಸ್ಸನ್ನಿಡಲು ಪ್ರಯತ್ನಿಸುವುದು.** ಮೊದಲನೆಯ ಅರ್ಥದಲ್ಲಿ ಹೇಳಿದ ತಪಸ್ಯೆಯನ್ನು ಆಚರಿಸಲೇನೂ ನಾನು ಪ್ರಯತ್ನಪಡಲಿಲ್ಲ. ಆದರೆ ನಾನಿದ್ದ ಪರಿಸ್ಥಿತಿ ಹೇಗಿತ್ತೆಂದರೆ, ನನಗೆ ಸಿಗುವುದರಲ್ಲಿಯೇ ನಾನು ತೃಪ್ತಿ ಪಡಬೇಕಾಗಿತ್ತು. ನಾನು ತಪಸ್ಯೆ ಮಾಡಿದ ಸ್ಥಾನದಲ್ಲಿ ಅದಕ್ಕಿಂತಲೂ ಹೆಚ್ಚು ಸೌಲಭ್ಯದ ವ್ಯವಸ್ಥೆ ಇರಲಿಲ್ಲ. ಹೀಗಾಗಿ ನಾನು ಸಹಜವಾಗಿಯೇ ಕಷ್ಟಪಡಬೇಕಾಗಿತ್ತು. ಇದಕ್ಕೇ 'ಕಠಿಣವಾದ ತಪಸ್ಯೆ' ಎಂದು ಬೇಕಾದರೂ ಕರೆಯಬಹುದು. ಆದರೆ ಹಾಗೆ ಕಷ್ಟಪಡಬೇಕೆಂದೇನೂ ನಾನು ಪ್ರಯತ್ನಿಸಲಿಲ್ಲ. ನಾನಿದ್ದದ್ದು ಹಿಮಾಲಯದ ಉತ್ತರಕಾಶಿಯಲ್ಲಿ. ಆಗಿನ ಕಾಲದಲ್ಲಿ ಅಲ್ಲಿ ಇದ್ದದ್ದು ಅಷ್ಟೇ ಸೌಲಭ್ಯ. ಹೀಗಾಗಿ ಅಲ್ಲಿರಲು ಯಾರೂ ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಅಲ್ಲಿನ ಪರಿಸ್ಥಿತಿಗೆ ಹೊಂದಿಕೊಳ್ಳದೆ ಬೇರೆ ಗತಿಯೇ ಇರಲಿಲ್ಲ. ಇಷ್ಟಾದರೂ, ಆರೋಗ್ಯವಾಗಿ ಇದ್ದ ನನ್ನ ಶರೀರಕ್ಕೆ ವಿಶೇಷವಾಗಿ ಕಷ್ಟವನ್ನೇನೂ ನಾನು ಕೊಡಲಿಲ್ಲ. ಏಕೆಂದರೆ ದೇಹರಕ್ಷಣೆ ಅತ್ಯಂತ ಅವಶ್ಯವಾಗಿತ್ತು. ನೆಲದ ಮೇಲೆ ಮಲಗಬೇಕಾಗಿದ್ದರಿಂದ, ಚಳಿಯನ್ನು ತಡೆದುಕೊಳ್ಳಲು, ನನ್ನ ಚಾಪೆಯ ಕೆಳಗೆ ಒಣಗಿದ ಹುಲ್ಲು ಹಾಸಿಕೊಳ್ಳುತ್ತಿದ್ದೆ. ಭಿಕ್ಷೆ ಕೂಡ ಯಥೇಚ್ಛವಾಗಿ ದೊರೆಯುತ್ತಿತ್ತು. ಹೀಗಾಗಿ, ಒಂದು ಹೊತ್ತು ಹೊಟ್ಟೆ ತುಂಬ ಊಟಮಾಡುತ್ತಿದ್ದೆ. ನನಗಿಂತಲೂ ಇನ್ನೂ ಕಷ್ಟಪಡುತ್ತಿದ್ದ ಹಲವಾರು ಸಾಧುಗಳನ್ನು ನೋಡುತ್ತಿದ್ದೆ. ಅವರಿಗೆ ಭಿಕ್ಷೆ ಕೂಡ ಸರಿಯಾಗಿ ಸಿಗುತ್ತಿರಲಿಲ್ಲ. ಆದರೆ ಅದೆಲ್ಲ 'ಕಷ್ಟದಾಯಕವಾದುದು' ಎಂದು ನನಗೆ ಎಂದೂ ಅನಿಸಿದ್ದಿಲ್ಲ. ಏಕೆಂದರೆ, ಸ್ವತಃ ನಾನೇ ಈ ಬಗೆಯ ಜೀವನವನ್ನು ಸ್ವೀಕರಿಸಲು ಮುಂದಾಗಿದ್ದೆನಲ್ಲವೇ?!

**ಪ್ರಶ್ನೆ : ಇಂದಿನ ಸಂಪದ್ಭರಿತ ಕಾಲದಲ್ಲಿ, ಒಬ್ಬ ತಪಸ್ವಿಯ ಮನೋಭಾವ ಹೇಗೆ ಇರಬೇಕೆಂದು ಹೇಳುತ್ತೀರಿ?**

**ಸ್ವಾಮೀಜಿ:** ಏನು ತಾನೇ ಹೇಳುತ್ತಿರುವೆ? ಎಲ್ಲಿದೆ ಸಮೃದ್ಧಿ? ಸಂಪತ್ತನ್ನು ನೋಡಬಯಸುವೆಯಾದರೆ, ಪಾಶ್ಚಾತ್ಯರ ಕಡೆ ನೋಡು. ಎಂಥ ಸಂಪತ್ತು! ಅವರಿಗೆ ತುಲನೆ ಮಾಡಿದರೆ, ನಮ್ಮದು ಎಂಥ ಸಂಪತ್ತು?! ನಾನು ಉತ್ತರಕಾಶಿಯಲ್ಲಿ ಕಳೆದ ಜೀವನಕ್ಕೆ ಹೋಲಿಸಿದಲ್ಲಿ, ಈಗಿನ ಕಾಲ ಸಂಪದ್ಭರಿತವಾದುದು ಎಂದು ಒಪ್ಪತಕ್ಕದ್ದೇ. ಆದರೆ ಆಗಿನ ಕಾಲದಲ್ಲಿ ನಮ್ಮ ದೇಶದ ಪರಿಸ್ಥಿತಿ ಆ ರೀತಿ ಇತ್ತು (ಬಡತನದಿಂದ ಕೂಡಿತ್ತು). ಈಗಿನ ಕಾಲದಲ್ಲಿ ದೇಶದಲ್ಲಿ ಎಷ್ಟೋ ಪ್ರಗತಿಯಾಗಿದೆ. ಜೊತೆಜೊತೆಗೆ ಸಾಧುಗಳ ಜೀವನಶೈಲಿಯಲ್ಲಿಯೂ ಶ್ರೀಮಂತಿಕೆ ಬಂದುಬಿಟ್ಟಿದೆ. ಆಗಿನಕಾಲದಲ್ಲಿ, ನಾವು ಅಪೇಕ್ಷಿಪಟ್ಟರೂ, ಆಗ ಇದ್ದುದಕ್ಕಿಂತ ಹೆಚ್ಚಿನ ಸೌಲಭ್ಯಗಳು ನಮಗೆ ಸಿಗುತ್ತಿರಲಿಲ್ಲ. ಏಕೆಂದರೆ ಇಡೀ ದೇಶದಲ್ಲಿ ಕಷ್ಟ ಮತ್ತು ದಾರಿದ್ರ್ಯಗಳು ಅದೇ ರೀತಿ ಇದ್ದವು. ಹಸಿದ ಒಬ್ಬ ಮನುಷ್ಯನಿಗೆ ತಿನ್ನಲು ಏನೂ ಸಿಗದೆ ಹೋದಾಗ ಅದನ್ನು 'ಹಸಿವೆ' ಎಂದು ಕರೆಯಬಹುದು. ಆದರೆ, ಯಾವಾಗಲೆಲ್ಲ ಊಟ ಸಿಗುವುದಿಲ್ಲವೋ, ಅದನ್ನೇ 'ಬಡತನ' ಎಂದು ಹೇಳಲಾಗದು. ಅದು 'ಉಪವಾಸ.' ಉಪವಾಸ ಮತ್ತು ಹಸಿವೆಗಳ ನಡುವೆ ಇರುವ ವ್ಯತ್ಯಾಸ ನಿನಗೆ ಗೊತ್ತೇನು? ಸಾಧುಗಳು ಹಸಿವೆಯಿಂದ ಇದ್ದಾರೆ ಎಂದರೆ, ಅದು ಅವರು ಸ್ವೇಚ್ಛೆಯಿಂದ ಮಾಡುವ ಉಪವಾಸ. ಹಸಿವೆ ಎನ್ನುವುದು ಇಚ್ಛೆಯಿಲ್ಲದೆ ಮಾಡುವುದು. ಉಪವಾಸ ಸ್ವೇಚ್ಛೆಯಿಂದ ಮಾಡುವುದು. ಇತರರ ದೃಷ್ಟಿಯಲ್ಲಿ ಅದು 'ಅಭಾವ' ಅನ್ನಿಸಿಕೊಳ್ಳಬಹುದು. ಆದರೆ ಒಬ್ಬ ಸಾಧುವಿಗೆ ಯಾವುದರ ಅಭಾವ ತಾನೆ ಇರುತ್ತದೆ? ಅಥವಾ ಅವನಿಗೆ ಅಭಾವ ಇರಬಾರದೇಕೆ? ಈ ಮಾತುಕತೆ ಸ್ವಲ್ಪ ದೀರ್ಘವಾಗುತ್ತಿದೆ. ನನ್ನ ಜೀವನದಲ್ಲಿ ನಡೆದ ಒಂದು ಘಟನೆಯನ್ನೇ ಹೇಳುತ್ತೇನೆ, ಕೇಳು.

ನಾನು ಉತ್ತರಕಾಶಿಯಲ್ಲಿ ಇರುವಾಗ ನಾನು ಅಲ್ಲಿ ಇದ್ದೇನೆಂದು ತಿಳಿದ ಒಬ್ಬ ಭಕ್ತರು ನನಗೆ ಮೂರು ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದರು. ಮೂರು ರೂಪಾಯಿಯ ವಿಷಯ ಇರಲಿ, ನನಗೆ ಖರ್ಚಿಗಾಗಿ ಒಂದು ಪೈಸೆಯೂ ಬೇಕಾಗಿರಲಿಲ್ಲ. ಹಾಗೆಂದೇ ಒಂದು ಪತ್ರ ಬರೆದು ಅವರಿಗೆ ನಾನು ಬಿನ್ನವಿಸಿಕೊಂಡೆ: **"ನನಗೆ ಹಣದ ಆವಶ್ಯಕತೆ ಇಲ್ಲ. ದಯಮಾಡಿ ಹಣ ಕಳಿಸಬೇಡಿ."**


ತಪಸ್ಯೆಯೆಂದರೆ ಸ್ವಯಂಪ್ರೇರಣೆಯಿಂದ ಸ್ವೀಕರಿಸುವ ಜೀವನವಿಧಾನ. ಅಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ. ಯಾರೋ ಒತ್ತಾಯ ಮಾಡಿ, ಗದರಿಸಿ, ಮಾಡಿಸಿದ್ದೂ ಅಲ್ಲ. ಈ ಹಿನ್ನೆಲೆಯಲ್ಲಿ ತಪಸ್ಯೆ ಎಂದರೆ ಸ್ವಲ್ಪ ದಿನಗಳ ಮಟ್ಟಿಗೆ ಜಗತ್ತಿನ ಎಲ್ಲ ಬಗೆಯ ಸಂಬಂಧಗಳನ್ನೂ ತ್ಯಜಿಸಿ, ನಿರ್ಜನ ಪ್ರದೇಶದಲ್ಲಿ ಕುಳಿತು, ಏಕಾಂತವಾಗಿ ಭಗವನ್ನಾಮ ಸ್ಮರಣೆ ಮಾಡುವುದು. ತಪಸ್ಯೆಯೆಂದರೆ ಇದಕ್ಕಾಗಿ ಪ್ರತ್ಯೇಕವಾದ ಸಮಯಾವಧಿಯನ್ನೇ ಮೀಸಲಾಗಿಡುವುದು; ಏಕಾಂಗಿಯಾಗಿದ್ದುಕೊಂಡು, ಭಗವಂತನ ಧ್ಯಾನ, ಭಜನೆ ಮಾಡುವುದು, ಆತನಿಗಾಗಿ ಕಣ್ಣೀರು ಸುರಿಸುವುದು. **ಕಣ್ಣೀರು ಹಾಕದೆ, ಭಗವತ್ಸಾಕ್ಷಾತ್ಕಾರ ಸಾಧ್ಯವೇ ಇಲ್ಲ.**

# ತುಳಸೀದಾಸ


ಕಥೆ: ಕೆ. ಸರಸ್ವತಿ

ಚಿತ್ರ: ಶಂಕರ್


**1** ಉತ್ತರಪ್ರದೇಶದ ಅಲಹಾಬಾದಿನ ಹತ್ತಿರ ರಾಜಪುರವೆಂಬ ಊರು ಇತ್ತು. ಅಲ್ಲಿ ಆತ್ಮಾರಾಮ ಮತ್ತು ಹುಲಸಿಬಾಯಿ ಎಂಬ ದಂಪತಿಗಳಿದ್ದರು. ಆಂಜನೇಯನ ವರಪ್ರಸಾದದಿಂದ ಅವರಿಗೆ ಒಂದು ಗಂಡು ಮಗು ಜನಿಸಿತು. ಮಗುವಿನ ಹೆಸರು ರಾಮ್‌ಭೋಲಾ ಎಂದು. ಮಗು ಜನಿಸಿದ ಕೆಲವೇ ದಿನಗಳಲ್ಲಿ ತಾಯಿಯಾದ ಹುಲಸಿಬಾಯಿಯು ಮರಣ ಹೊಂದಿದಳು. ಆತ್ಮಾರಾಮನು ತನ್ನ ಮಗುವನ್ನು ಅದರ ಅಜ್ಜಿಯ ಹತ್ತಿರ ಬಿಟ್ಟು, ಎಲ್ಲಿಗೋ ಹೊರಟುಹೋದನು.





**2** ಅಜ್ಜಿಯ ಆರೈಕೆಯಿಂದ ಮಗು ಚೆನ್ನಾಗಿ ಬೆಳೆಯುತ್ತಿತ್ತು. ನಾಲ್ಕು ವರ್ಷವಾದಾಗ ಅಜ್ಜಿಯೂ ತೀರಿಕೊಂಡಳು. ದಿಕ್ಕಿಲ್ಲದ ರಾಮಭೋಲಾ ತನ್ನ ಊಟಕ್ಕಾಗಿ ಕೂಡ ಹಳ್ಳಿಯವರನ್ನು ಆಶ್ರಯಿಸಬೇಕಾಯಿತು.




**3** ಹೀಗಿರುವಾಗ ನರಹರಿದಾಸರೆಂಬ ಸಂತರು ರಾಜಪುರಕ್ಕೆ ಆಗಮಿಸಿದರು. ಅವರು ದೇವಸ್ಥಾನದಲ್ಲಿ ಧಾರ್ಮಿಕ ಪ್ರವಚನಗಳನ್ನು ನಡೆಸುತ್ತಿದ್ದರು. ಜೊತೆಗೆ ಭಜನೆಯ ಕಾರ್ಯಕ್ರಮವೂ ಇರುತ್ತಿತ್ತು. ರಾಮಭೋಲಾ ಈ ಕಾರ್ಯಕ್ರಮಗಳಲ್ಲಿ ಶ್ರದ್ಧಾ ಭಕ್ತಿಗಳಿಂದ ಪಾಲ್ಗೊಳ್ಳುತ್ತಿದ್ದನು.





**4**




**5** ನರಹರಿದಾಸರು ಪ್ರವಚನಕ್ಕೆ ಹೋದ ಕಡೆಯೆಲ್ಲಾ ರಾಮಭೋಲಾ ಕೂಡ ಅವರ ಜೊತೆಯಲ್ಲಿ ಹೋಗುತ್ತಿದ್ದನು. ಪ್ರವಚನ ಪ್ರಾರಂಭಿಸುವವರೆಗೂ ರಾಮಭೋಲಾ ಭಜನೆ ನಡೆಸುತ್ತಿದ್ದನು. ಈಗ ಅವನ ಹೆಸರು 'ತುಲಾರಾಮ' ಎಂದು ಮಾರ್ಪಾಡಾಯಿತು.

**6** ತುಲಾರಾಮ ನರಹರಿದಾಸರ ಜೊತೆ ಹದಿನಾಲ್ಕು ವರ್ಷಗಳ ಕಾಲ ವಾಸಮಾಡಿದನು. ಆ ಸಮಯದಲ್ಲಿ ಸಂಸ್ಕೃತ, ವೇದ, ಉಪನಿಷತ್ತು, ಪುರಾಣ, ತರ್ಕ ಹಾಗೂ ಇತರ ಶಾಸ್ತ್ರವಿಷಯಗಳಲ್ಲಿ ಪ್ರಾವೀಣ್ಯತೆ ಪಡೆದು ದೊಡ್ಡ ಪಂಡಿತನಾದನು. ತನ್ನ ಗುರುವಿನಂತೆ ತಾನೂ ಧಾರ್ಮಿಕ ಪ್ರವಚನಗಳನ್ನು ಕೊಡಲಾರಂಭಿಸಿದನು.





**7** ತುಲಾರಾಮ ತುಂಬು ಯೌವನದ ಸುಂದರ ಯುವಕ, ವಿದ್ಯಾವಂತ. ಒಳ್ಳೆಯ ಸಂಪಾದನೆ ಜೊತೆಗೆ ಒತ್ತಾಸೆಯಾಗಿ ಪ್ರೀತಿಸುವ ಪತ್ನಿ. ಇನ್ನೇನು ಬೇಕು? ಇವುಗಳಿಂದ ಕ್ರಮೇಣ ಅವನಿಗೆ ದೈವಭಕ್ತಿ ಕಡಮೆಯಾಗುತ್ತ ಬಂದಿತು. ಮನಸ್ಸು ಸದಾ ಹೆಂಡತಿಯ ಸುತ್ತಲೇ ಸುತ್ತುತ್ತಿತ್ತು. ಅರೆಗಳಿಗೆಯೂ ಬಿಟ್ಟಿರಲಾರದೆ, ಅವಳನ್ನು ತಾಯಿಯ ಮನೆಗೂ ಕಳುಹಿಸುತ್ತಿರಲಿಲ್ಲ.

**8** ಒಮ್ಮೆ ತುಲಾರಾಮರು ಪ್ರವಚನ ಕಾರ್ಯಕ್ರಮಕ್ಕಾಗಿ ಪರಸ್ಥಳಕ್ಕೆ ಹೋಗಿದ್ದರು. ಈ ಅವಕಾಶವನ್ನು ಉಪಯೋಗಿಸಿಕೊಂಡು, ರತ್ನಾವಳಿಯ ಸಹೋದರನು ತವರುಮನೆಗೆ ಕೆಲವು ದಿನಗಳ ಮಟ್ಟಿಗೆ ಅವಳನ್ನು ಕರೆದುಕೊಂಡು ಹೋಗಲು ಬಯಸಿದನು.




**9** ರತ್ನಾವಳಿ ತವರುಮನೆಗೆ ಹೊರಟಳು. ಇತ್ತ ತುಲಾರಾಮರು ಮನೆಗೆ ಹಿಂತಿರುಗಿದರು. ರತ್ನಾವಳಿ ಇಲ್ಲದ ಮನೆ ಕಗ್ಗತ್ತಲಿನಂತಾಗಿ ಅವರಿಗೆ ಅಲ್ಲಿ ಇರಲು ಆಗಲೇ ಇಲ್ಲ. ಕೂಡಲೇ ಪತ್ನಿಯನ್ನು ಕಾಣಲು ಹೊರಟುಬಿಟ್ಟರು.


10 ಆ ರಾತ್ರಿ ಭಾರೀ ಮಳೆ ಸುರಿಯುತ್ತಿತ್ತು. ಗಂಗಾನದಿಯು ತನ್ನ ಎರಡೂ ದಡಗಳಲ್ಲಿ ಉಕ್ಕಿಹರಿಯುತ್ತಿತ್ತು. ಹಳ್ಳಿಯಲ್ಲೆಲ್ಲ ನೀರು ತುಂಬಿ ಪ್ರವಾಹ ಬಂದಿತ್ತು.
ಅಂಬಿಗಾ, ಬೇಗ ದೋಣಿಯನ್ನು ಬಿಡು. ಆಚೆ ದಡವನ್ನು ಶೀಘ್ರವಾಗಿ ತಲುಪಬೇಕಾಗಿದೆ.
ಆಗುವುದಿಲ್ಲ ಸ್ವಾಮಿ, ಬಿರುಗಾಳಿ ಜೋರಾಗಿ ಬೀಸುತ್ತಿದೆ.
11 ತುಲಾರಾಮರ ಮನಸ್ಸಿಗೆ ಬಹಳ ನೋವಾಯಿತು. ಪತ್ನಿಯನ್ನು ಕಾಣುವುದಕ್ಕಾಗಿ ಹಲುಬುತ್ತಿದ್ದಾರೆ. ಆಚೆಯ ದಡವನ್ನು ತಲುಪುವುದಕ್ಕಾಗಿ ಈಜಲೆಂದು ನದಿಯಲ್ಲಿ ಧುಮುಕಿದರು. ಒದ್ದೆಯಾದ ಬಟ್ಟೆಗಳನ್ನು ಸಹ ಹಿಂಡದೆ ರತ್ನಾವಳಿಯ ಮನೆಗೆ ಬಂದು ಕದವನ್ನು ತಟ್ಟಿದರು.
ಈ ಅವೇಳೆಯಲ್ಲಿ ನೀವು ! ಈ ಮಳೆಯಲ್ಲಿ, ಕೊಚ್ಚಿ ಕೊಂಡು ಹೋಗುತ್ತಿರುವ ಪ್ರವಾಹದಲ್ಲಿ ಇಲ್ಲಿಗೆ ಹೇಗೆ ತಾನೇ ಬಂದಿರಿ?
ನೀನಿಲ್ಲದೆ ಮನೆಯಲ್ಲಿ ಒಬ್ಬಂಟಿಯಾಗಿ ಇರಲಾಗಲಿಲ್ಲ!
ಎಂಥಾ ಹುಚ್ಚು ! ನೀವು ನನ್ನಲ್ಲಿ ಇಟ್ಟಿರುವ ಪ್ರೀತಿಯ ಒಂದಂಶದಷ್ಟಾದರೂ ಶ್ರೀರಾಮನಲ್ಲಿ ಇಟ್ಟಿದ್ದರೆ, ಈ ಜನ್ಮದಲ್ಲೇ ಮುಕ್ತಿ ಪಡೆಯುತ್ತಿದ್ದಿರಿ.
12 ಪತ್ನಿಯ ಮಾತುಗಳು ತುಲಾರಾಮರ ಕಣ್ಣು ತೆರೆಸಿದವು. ಅವು ಅವರ ಬದುಕನ್ನೇ ಬದಲಾಯಿಸಿಬಿಟ್ಟವು.
ನನ್ನ ದೃಷ್ಟಿಗೆ ಕವಿದಿದ್ದ ಮುಸುಕು ಹರಿಯಿತು. ನನ್ನ ಮೋಹ ತೊಲಗಿತು. ಇನ್ನು ಮುಂದೆ ರಾಮನನ್ನು ಮಾತ್ರ ಭಜಿಸುತ್ತೇನೆ. ಅವನ ಮಹಿಮೆಯನ್ನು ಮಾತ್ರ ಸಾರುತ್ತೇನೆ.
13 ಇವರೇ ಸುಪ್ರಸಿದ್ಧ ತುಳಸೀದಾಸರು. ತುಳಸೀದಾಸರು ಜನಸಾಮಾನ್ಯರ ಆಡುಭಾಷೆಯಲ್ಲಿ ಕೀರ್ತನೆಗಳನ್ನೂ, ಹಾಡುಗಳನ್ನೂ ರಚಿಸಿದರು. ಅನಂತರ ಕಾಶಿಗೆ ತೆರಳಿದರು.